ಸೇತುವೆ ಮೇಲಿನ ಶುಲ್ಕ ವಸೂಲಾತಿಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯದ ದಿನಾಂಕ: 19-2-1992ರ ಅಧಿಸೂಚನೆಯಂತೆ, ಸೇತುವೆ ನಿರ್ಮಾಣ ಪೂರ್ಣ ವೆಚ್ಚ, ನಿರ್ವಹಣೆ ದುರಸ್ತಿ ವೆಚ್ಚ ಹಾಗೂ ಇದರ ಮೇಲಿನ ವರ್ಷಾವಾರು ಬಡ್ಡಿ ಇತ್ಯಾದಿ ವಸೂಲಾಗುವವರೆಗೆ ಮುಂದುವರೆಸಲಾಗುವುದು.

....

43 (298): ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್ (ಕುಷ್ಟಗಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳನ್ನು ಯಾವ ಯಾವ ವರ್ಷ ರಾಷ್ಟ್ರೀಯ ಹೆದ್ದಾರಿಗಳೆಂದು ಕೇಂದ್ರ ಸರ್ಕಾರ ಘೋಷಿಸಿದೆ: (ಆದೇಶದ ಪ್ರತಿಗಳನ್ನು ಒದಗಿಸುವುದು) ಇವುಗಳ ಮಾರ್ಗ ಮತ್ತು ಉದ್ದಳತೆಗಳ ವಿವರ ಮತ್ತು ಕಳೆದ ಮೂರು ಆರ್ಥಿಕ ಸಾಲಿನಿಂದ ಇಂದಿನವರೆವಿಗೂ ಕೇಂದ್ರ ಸರ್ಕಾರವು ಈ ರಸ್ತೆಗಳಿಗೆ ವಿವಿಧ ಶೀರ್ಷಿಕೆ ಅಡಿಯಲ್ಲಿ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು?

ಆ) ಕಳೆದ ಮೂರು ವರ್ಷಗಳಿಂದ ಸರ್ಕಾರವು ಯಾವ ಯಾವ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕೋರಿ ಕೇಂದ್ರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗಳೆಷ್ಟು; ಅವುಗಳ ವಿವರಗಳನ್ನು ಒದಗಿಸುವುದು;

ಇ) ಸರ್ಕಾರದ ನೇರ ನಿಯಂತ್ರಣದಲ್ಲಿರುವ ರಸ್ತೆಗಳ ವಾರ್ಷಿಕ ಕಾರ್ಯನಿರ್ವಾಹಣೆಗಾಗಿ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು ಮತ್ತು ಈ ಸಂಬಂಧವಾಗಿ ಕಳೆದ ಮೂರು ವರ್ಷಗಳಲ್ಲಿ ಜಿಲ್ಲಾವಾರು ಖರ್ಚು ಮಾಡಲಾಗಿರುವ ಹಣದ ವಿವರ ನೀಡುವುದು:

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 14 ರಾಷ್ಟ್ರೀಯ ಹೆದ್ದಾರಿಗಳಿವೆ. ಅವುಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ಈ ಹೆದ್ದಾರಿಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ 5054 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನದ ಮೊತ್ತದ ವಿವರಗಳು ಈ ಕೆಳಕಂಡಂತಿವೆ:

ಕ್ರಮ ಸಂಖ್ಯೆ	ವರ್ಷಗಳು	ಮೊತ್ತ ಕೋಟಿ ರೂ.ಗಳಲ್ಲಿ
1.	2001-02	109.88
2.	2002-03	89.56
3.	2003-04	150.35

ಆ) ಕಳೆದ ಮೂರು ವರ್ಷಗಳಲ್ಲಿ 6 ರಾಜ್ಯ ಹೆದ್ದಾರಿ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಅವುಗಳ ವಿವರ ಅನುಬಂಧ-2ರಲ್ಲಿ ನೀಡಲಾಗಿದೆ.

ಇ) ಕಳೆದ ಮೂರು ವರ್ಷಗಳಲ್ಲಿ 3054 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರಾಷ್ಟ್ರೀಯ ಹೆದ್ದಾರಿ ರಸ್ತೆ ವಾರ್ಷಿಕ ನಿರ್ವಹಣೆಗಾಗಿ ಬಿಡುಗಡೆ ಮಾಡಿರುವ ಅನುದಾನದ ಮೊತ್ತದ ವಿವರಗಳು ಈ ಕೆಳಕಂಡಂತಿವೆ:

ಕ್ರಮ ಸಂಖ್ಯೆ	ವರ್ಷಗಳು	ಮೊತ್ತ ಕೋಟಿ ರೂ.ಗಳಲ್ಲಿ
1.	2001–02	39.02
2.	2002–03	45.82
3.	2003–04	38.73

ಅನುಬಂಧ – I

LENGTH OF NATIONAL HIGHWAYS IN KARNATAKA

Sl. No.	N.H. N.o.	Description	Length K.M. in State	Year of Declaration
1.	4	Madras-Kolar-Bangalore-Hubli-Belgaum-Poona-Bombay	700	September 1956
2.	4A	Belgaum-Khanapur-Anmod-Panjim	84	July 1971
3.	7	Benaras-Nagapur-Hyderabad-Kurnool-Bagepalli-Bangalore-Hosur-Krishnagiri-Madhurai-Cape Camorin.	128	September 1956
4.	9	Poona-Sholapur-Humnabad-Hyderabad-Vijayawada	75	September 1956
5.	13	Sholapur-Chitradurga-Chennagiri-Shimoga-Thirthahalli-Sringeri-Karkala-Mangalore	715	May 1960 and January 1999
6.	17	Panavel-Panjim-Karwar-Coondapur Udupi-Mangalore-Cannanore-Trichur	297	March 1972
7.	48	Bangalore-Nelemangala-Kunigal Hassan-Sakaleshpur-Mangalore	320	May 1972
8.	63	Ankola-Hubli-Hospet-Bellary-Gooty	369	February 1998
9.	67	Mettupalyam-Ooty-Gudalur-Junction	27	Feb 2004

1	2	3	4	5
	(Extn)	with NH 212 near Gundlupet		
10.	206	Tumkur-Shimoga-Honnavar	370	January 1999
11.	207	Hosur (on NH-7)-Sarjapur-Devanahalli-Doddaballapur-Dobespet (on NH-4)	122	January 1999
12.	209	Dindigal-Pollachi-Coimbatore-Annur-Sathyamangalam-Chamarajanagar-Kollegal-Bangalore	203	January 1999
13.	212	The Highway starting from its junction NH-17 near Kozhikode in Kerala connecting Mysore and terminating at its junction with NH-209 near Kollegal in Karnataka.	150	July 1999
14.	218	Hubli-Bijapur	193	Oct. 2000
	218 extn	Bijapur-Jeewargi-Humnabad	220	Feb 2004
		Total	3973	

ಅನುಬಂಧ – 2

Roads proposed in Karnataka for being declared as National Highways

Sl. No.	Name of the Road
1.	State Highway No. 24 from Hiriyur on NH-4 linking NH-7 at Penugonda in Andhra Pradesh.
2.	The Highway starting from the junction of NH-7 near Coimbatore in the State of Tamillnadu connecting Mettupalyam-Ooty-Gudlur and terminating at its junction with NH-212 near Gundlupet in the State of Karnataka.
3.	The Highway starting from its junction with NH-13 near Bijapur and connecting Jewargi-Gulbarga and terminating at its junction with NH-9 near Humnabad in the State of Karnataka.

4. Jewargi to Bellary via Hattigudur, Lingsugur, Sindhanur.
5. Doddaballapur-Kolar Road via Nandi-Vijayapura-Vemgal.
6. Road connecting from Dharwad on NH-4 to Ramanagara (NH-4A).

....

44 (55): ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ–ಭದ್ರಾವತಿ ರಸ್ತೆಯ ತುಂಗಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆ ಶಿಥಿಲವಾಗಿದ್ದು, ಹೊಸ ಸೇತುವೆಯನ್ನು ನಿರ್ಮಿಸಲು ಸಂಬಂಧವಾಗಿ ಸರ್ಕಾರವು ಯೋಜನೆಯನ್ನು ರೂಪಿಸಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಸೇತುವೆ ನಿರ್ವಾಣದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಯಾವುದಾದರೂ ಯೋಜನೆಯಡಿಯಲ್ಲಿ ಅನುದಾನದ ಲಭ್ಯತೆಯನ್ನು ಆಧರಿಸಿ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಲಾಗುವುದು

ಅನುಬಂಧ–II

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

....

112 (156): ಶ್ರೀ ಅಂಗಾರ ಎಸ್. (ಸುಳ್ಯ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಾಲ್ಸೂರು–ಸುಬ್ರಹ್ಮಣ್ಯ ಪವಿತ್ರ ಪುಣ್ಯ ಕ್ಷೇತ್ರವಾದ ಕುಕ್ಕೆ ಶ್ರೀ ಸುಬ್ರಹ್ಮಣ್ಯಕ್ಕೆ ಹೋಗುವ ಪ್ರಮುಖ ರಸ್ತೆಯ ದುರಸ್ತಿಯಿಂದಾಗಿ ವಾಹನ ಸಂಚಾರಕ್ಕೆ ತೊಂದರೆಯಾಗಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ರಸ್ತೆಯ ದುರಸ್ತಿಗೆ ಸರ್ಕಾರ ಈವರೆಗೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು;

ಇ) ಈ ರಸ್ತೆಯ ದುರಸ್ತಿಗೊಳಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಸದರಿ ರಸ್ತೆಯು ಹಲವು ಭಾಗಗಳಲ್ಲಿ ಸುಗಮ ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಜಾಲ್ಸೂರು ಸುಬ್ರಹ್ಮಣ್ಯ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಒಟ್ಟು 410 ಕಿಮೀ ಉದ್ದವಿರುತ್ತದೆ. ಈ ರಸ್ತೆಯ ಕಿಮೀ 11.40 ರಿಂದ 18.00 ವರೆಗೆ 2003ನೇ ಸಾಲಿನಲ್ಲಿ ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿರುತ್ತದೆ. (ಅಭಿವೃದ್ಧಿ